ಕೆ. ಜಿ. ಎಫ್ ರಸ್ತೆ ಸಾರಿಗೆ ಬಗ್ಗೆ.

೪೦೪ (ಬಿ) ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ. ಜಿ. ಎಫ್ ನಿಂದ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ದೂರ ಪ್ರಯಾಣದ ರಸ್ತೆಗಳಲ್ಲಿ ಬಸ್ಸುಗಳನ್ನು ಓಡಿಸುವುದಾಗಿ ಸರ್ಕಾರದವರು ವಾಗ್ದಾನ ಮಾಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಓಡಿಸಲಾಗುವುದು?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಹೌದು.

ಆ) ಕೆ ಜಿ. ಎಫ್. ನಿಂದ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯದಲ್ಲಿ ಕೆಲವು ಸ್ಥಳಗಳಿಗೆ ಆಯಾ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಯವರು ತಾತ್ಕಾಲಿಕ ಪರವಾನಿಗೆಗಳ ಆಧಾರದ ಮೇಲೆ ಈಗಾಗಲೇ ಬಸ್‌ಗಳನ್ನು ಓಡಿಸುತ್ತಿದ್ದಾರೆ.

ಈಗಾಗಲೇ ಕೆಳಕಂಡ ಮಾರ್ಗಗಳಲ್ಲಿ ಸಾರಿಗೆ ವ್ಯವಸ್ಥೆ ಮಾಡಲಾಗಿದೆ.

೧ ಕೆ.ಜಿ.ಎಫ್.—ವೇದಾಸ್ ವೆಲ್ಲೂರು ಮಾರ್ಗ

೨ ಕೆ. ಜಿ. ಎಫ್.—ಗುಡಿಯಾತ್ತಮ್

೩ ಕೆ. ಜಿ. ಎಫ್.—ರಾಮಕಂಪ್ಪಂ

ಮೆ. ಹೆಚ್. ದಾಸಪ್ಪ ಮತ್ತು ಮಕ್ಕಳು ಇವರು ಅಬಕಾರಿ ಬಾಕಿದಾರರಾಗಿದ್ದವರು ಹರಾಜಿನಲ್ಲಿ ಭಾಗವಹಿಸುವ ಬಗ್ಗೆ

೫೬೪. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೆ: ಹೆಚ್. ದಾಸಪ್ಪ ಮತ್ತು ಮಕ್ಕಳು ಇವರು ಅಬಕಾರಿ ಬಾಕಿದಾರರಾಗಿದ್ದರು ಅವರನ್ನು ಹರಾಜಿನಲ್ಲಿ ಭಾಗವಹಿಸಲು ಅನುಮತಿ ಕೊಟ್ಟಿರುವುದು ನಿಜವೇ?

ಆ) ಅಂತಹ ಹರಾಜಿನ ವಿಷಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುವರೆ?

ಇ) ಅಂತಹ ರಿಟ್ ಅರ್ಜಿಯಲ್ಲಿ ಉಚ್ಚ ನ್ಯಾಯಾಲಯದ ತೀರ್ಮಾನವೇನು?

ಈ) ನ್ಯಾಯಾಲಯದ ತೀರ್ಪಿನ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಉ) ಇನ್ನು ಬಾಕಿ ಉಳಿದಿರುವ ರಿಟ್ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ಡಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ಹೌದು,

ಆ) ಹೌದು —

ಇ) ಮೆ: ಹೆಚ್. ದಾಸಪ್ಪ ಮತ್ತು ಮಕ್ಕಳ ಸವಾಲುಗಳನ್ನು ಸ್ವೀಕರಿಸಿರುವುದನ್ನು ನಿಷ್ಪರಿಣಾಮಗೊಳಿಸಿದೆ.

ಈ) ಉಚ್ಚ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ ಮೆ: ಹೆಚ್. ದಾಸಪ್ಪ ಮತ್ತು ಮಕ್ಕಳ ಹೆಚ್ಚಿನ ಸವಾಲು ಎಲ್ಲೆಲ್ಲಿ ಅವರ ಪರವಾಗಿತ್ತೋ ಆ ಸ್ಥಳಗಳಲ್ಲಿ ಉಳಿದಿರುವ ಅಬಕಾರಿ ಸಾಲಿನ ಅವಧಿಯಲ್ಲಿ ಸಾರಾಯಿ, ಸೇಂದಿಯ ವಿಲೇವಾರಿಯನ್ನು ಟೆಂಡರ್ ಮೂಲಕ ವಿಲೇವಾರಿ ಮಾಡಬೇಕೆಂದು ಅಬಕಾರಿ ಆಯುಕ್ತರಿಗೆ ಸೂಚಿಸಲಾಗಿತ್ತು. ಅದೇ ರೀತಿ ೧೭-೨-೧೯೮೭ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಯಿತು. ಆದರೆ ತಾ. ೨೧-೨-೧೯೮೭ ರಂದು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ಮತ್ತು ಶ್ರೀರಂಗಪಟ್ಟಣದ ಸಿವಿಲ್ ನ್ಯಾಯಾಧೀಶರು

ಮಂತ್ರು ಹರಪನಹಳ್ಳಿ ಮುನಿಸಿಫ್ ಕೋರ್ಟಿನಿಂದ ತಡೆಯಾಜ್ಞೆ ಬಂದಿದ್ದರಿಂದ ಮುಂದಿನ ಕ್ರಮ ತೆಗೆದು ಕೊಳ್ಳಲು ಸಾಧ್ಯವಾಗಲಿಲ್ಲ.

ಉ) ಒಂದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ ರಾಚಯ್ಯ (ಗೃಹ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳ ಪೆಸರಿನಲ್ಲಿರತಕ್ಕ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧) ೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ ೧೯೪(೨)ನೇ ಕಲಮಿನ ಮೇರೆಗೆ ಹಿರೇಕೆರೂರು ತಾಲ್ಲೂಕಿನ ೬೦ ಗ್ರಾಮಗಳಿಗೆ ೧೯೮೦–೮೧ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೦ನೇ ಆಕ್ಟೋಬರ್ ೧೯೮೬ರಂದು ಹೊರಡಿಸಲಾದ ಆರ್.ಡಿ. ೧೭೧ ಟಿಆರ್ಎಂ ೮೬ನೇ ಕ್ರಮಾಂಕದ ಅಧಿಸೂಚನೆ.

೨) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ೯೫ ಗ್ರಾಮಗಳಿಗೆ ೧೯೮೦–೮೧ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೬ನೇ ಡಿಸೆಂಬರ್, ೧೯೮೬ರಂದು ಹೊರಡಿಸಲಾದ ಆರ್ ಡಿ ೧೭೦ ಟಿ.ಆರ್.ಎಂ. ೮೬ನೇ ಕ್ರಮಾಂಕದ ಅಧಿಸೂಚನೆ, ಹಾಗೂ

೩) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ೨ ಗ್ರಾಮಗಳಿಗೆ ೧೯೮೪–೮೫ನೇ ಸಾಲಿನಲ್ಲಿ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೪ನೇ ಫೆಬ್ರುವರಿ, ೧೯೮೭ರಂದು ಹೊರಡಿಸಲಾದ ಆರ್.ಡಿ. ೬೧ ಟಿ ಆರ್.ಎಂ. ೮೫ನೇ ಕ್ರಮಾಂಕದ ಅಧಿಸೂಚನೆ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಮೊಹಮದ್ ಮೊಯಿನುದ್ದೀನ್.— ೧೯೭೬–೭೭ ಹಾಗೂ ೧೯೭೫–೭೯ ಮತ್ತು ೧೯೮೨–೮೩ನೇ ಸಾಲಿನ ಭಾರತದ ಆಡಿಟರ್ ಮತ್ತು ಕಂಟ್ರೋಲರ್‌ರವರ ವರದಿಯಲ್ಲಿ ಮೈಸೂರು ಮಿನರಲ್ಸ್‌ನವರ ಮೇಲೆ ಮಾಡಿದ ವ್ಯಾಖ್ಯಾನಗಳನ್ನು ಕುರಿತು ಸಾರ್ವಜನಿಕ ಉದ್ಯಮಗಳ ಸಮಿತಿಯ ವರದಿ ಹಾಗೂ ಮೈಸೂರು ಮಿನರಲ್ಸ್ ಬಗ್ಗೆ ಸಾರ್ವಜನಿಕ ಉದ್ಯಮಗಳ ಸಮಿತಿಯ ೨೬ನೇ ವರದಿಯನ್ನು ಸಭೆಯ ಮುಂದೆ ಇಡಲಾಯಿತು,

ಅಧ್ಯಕ್ಷರು.— ವರದಿಗಳನ್ನು ಒಪ್ಪಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಯಮಕನ ಮರ್ಡಿ ಸಿ.ಇ.ಎಸ್. ಸೊಸೈಟಿ ವತಿಯಿಂದ ಕಿರಿಯ ಕಾಲೇಜು ಪ್ರಾರಂಭಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಕೊಡಿಯಾಲ ಗ್ರಾಮದ ಕಲ್ಬಡ ಹರಿಜನ ಕಾಲೋನಿಯ ರಸ್ತೆಯನ್ನು ದುರಸ್ತಿ ಮಾಡಿ ಡಾಂಬರೀಕರಣದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.